SEVA BHARATHI
सेवा ही परमो धर्मः

ಸಂಪುಟ : 03
ಸಂಚಿಕೆ : 09

# ಸೇವಾಪಥ

ಸೇವಾಭಾರತಿ(ರಿ.), ಬೆಳ್ತಂಗಡಿ ತಾ॥ ಇದರ
(ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ-2019 ಪುರಸ್ಕೃತ ಸಂಸ್ಥೆ)
ಮಾಸಿಕ e-ನ್ಯೂಸ್ ಲೆಟರ್ - ನವಂಬರ್ 2022

ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ-II, ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ. - 574 216

## ಜೀವನೋಪಾಯ ತರಬೇತಿ ಕಾರ್ಯಾಗಾರ



## ಸರಕಾರದಿಂದ ಸೇವಾಭಾರತಿಗೆ 10 ಸೆಂಟ್ಸ್ ಜಾಗ ಮಂಜೂರು

## ಕುವೈಟ್‌ನ ತುಳುಕೂಟದಿಂದ ರೂ. 1 ಲಕ್ಷ ದೇಣಿಗೆ

## ಸ್ವಉದ್ಯೋಗ ಯೋಜನೆಗಾಗಿ ಬೆಂಗಳೂರಿನ ಗಿಫ್ಟ್ ಎಬಲ್ಡ್‌ನೊಂದಿಗೆ ಒಡಂಬಡಿಕೆ

## ದಾನಿಯಾದ ಉಡುಪಿ ಕೃಷ್ಣ ಕೋಟ್ಯಾನ್‌ರಿಂದ 54 ಸಾವಿರ ದೇಣಿಗೆ

## ಪಡುಬಿದ್ರಿ ವ್ಯವಸಾಯಿಕ ಬ್ಯಾಂಕ್‌ನಿಂದ 50 ಸಾವಿರ ದೇಣಿಗೆ

## ಸುಳ್ಯದಲ್ಲಿ ಸಂಸ್ಥೆಯ 2 ದಿನಗಳ 17ನೇ ಶಿಬಿರ

## ಬೆನ್ನುಹುರಿ ಅಪಘಾತಕ್ಕೊಳಗಾದವರ ಸ್ವ ಉದ್ಯೋಗ ಪ್ರೇಮ

## ಬದುಕು ಸಿಹಿಯಾಗಿಸಿದ ಜೇನು ಕೃಷಿ

Mob. : 99454 91241 | E-mail: sevabharathikanyady@gmail.com | Website: www.sevaabharathi.org

## ನಮ್ಮಿಂದಿಷ್ಟು

ನಮ್ಮ ಸೇವಾಕಾರ್ಯದ ಕಾರ್ಯ ವಿಸ್ತಾರದ ಫಲವಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ನಿಧಾನವಾಗಿ ಒಂದೊಂದೇ ಕೆಲಸಗಳು ಪ್ರಾರಂಭವಾಗಿವೆ. ಕುಮಟಾ ಮತ್ತು ಹೊನ್ನಾವರ ತಾಲೂಕಿನಲ್ಲಿರುವ ಬೆನ್ನುಹುರಿ ಅಪಘಾತಕ್ಕೊಳಗಾದವರನ್ನು ಪ್ರಥಮ ಹಂತವಾಗಿ ಗುರುತಿಸಲಾಗಿದೆ. ಸುಮಾರು 22 ಮಂದಿ ಅನೇಕ ದ್ವಿತೀಯಾಂತರ ಸಮಸ್ಯೆಗಳಿಂದ ಬಳಲುತ್ತಿದ್ದು, ಗಂಭೀರ ಸ್ಥಿತಿಯಲ್ಲಿ ಇರುವುದು ಕಂಡುಬಂದಿದೆ.

ಇದಕ್ಕೆ ಪರಿಹಾರರೂಪವಾಗಿ ಡಿಸೆಂಬರ್ ತಿಂಗಳಲ್ಲಿ 9 ಮತ್ತು 10ನೇ ದಿನಾಂಕಗಳಂದು 2 ದಿನಗಳ ಉಚಿತವಾಗಿ ವಸತಿಯುತ ಆರೋಗ್ಯ ಮಾಹಿತಿ, ತಪಾಸಣೆ ಮತ್ತು ತರಬೇತಿ ಶಿಬಿರವನ್ನು ಕುಮಟಾದ ಹೆಲ್ತ್ ಕೇರ್ ಸೆಂಟರ್‌ನಲ್ಲಿ ನಡೆಸಲು ಯೋಜಿಸಲಾಗಿದೆ.

ಫಲಾನುಭವಿಗಳಿಗೆ ಗಾಲಿಕುರ್ಚಿ, ಒತ್ತಡ ಗಾಯ ಹೊಂದಿರುವವರಿಗೆ ಮೆಡಿಕಲ್ ಕಿಟ್, ಸೆಲ್ಫ್‌ಕೇರ್ ಕಿಟ್‌ಗಳನ್ನು ದೊರಕಿಸಿಕೊಡಲು ಪ್ರಯತ್ನಗಳು ನಡೆದಿವೆ. ಆರ್ಥಿಕ ಕ್ರೋಢೀಕರಣಕ್ಕೆ ದಾನಿಗಳನ್ನೂ ವಿನಂತಿಸಲಾಗಿದೆ.

ಈ ತಿಂಗಳ ಇನ್ನೊಂದು ಬಹುಮುಖ್ಯ ವಿಷಯ ಧರ್ಮಸ್ಥಳ ಮುಖ್ಯರಸ್ತೆಯ ಬದಿಯಲ್ಲಿ 10 ಸೆಂಟ್ಸ್ ಜಾಗವು ನಮ್ಮ ಸಂಸ್ಥೆಗೆ ಸಚಿವ ಸಂಪುಟ ಸಭೆಯಲ್ಲಿ ಮಂಜೂರಾತಿಗೊಂಡಿರುವುದು. ಇದಕ್ಕೆ ಪ್ರಯತ್ನಿಸಿದ ಶಾಸಕದ್ವಯರಾದ ಹರೀಶ್ ಪೂಂಜ ಮತ್ತು ಕೆ. ಪ್ರತಾಪ್ ಸಿಂಹ ನಾಯಕ್‌ರವರಿಗೆ ಸಮಿತಿಯ ಎಲ್ಲಾ ಪದಾಧಿಕಾರಿಗಳ ಪರವಾಗಿ ಕೃತಜ್ಞತೆಗಳು.

॥ ಸೇವಾ ಹಿ ಪರಮೋ ಧರ್ಮಃ ॥

ಇತೀ ತಮ್ಮವ

**ಕೆ. ವಿನಾಯಕ ರಾವ್**

## ನಮ್ಮ ವಿಳಾಸ

### ಪ್ರಧಾನ ಕಚೇರಿ :

ಸೇವಾನಿಕೇತನ, ಕನ್ಯಾಡಿ–॥
ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು – 574 216
ಮೊ.: 99454 91241

### ಜಿಲ್ಲಾ ಕಚೇರಿ :

ಸೇವಾನಿಕೇತನ
ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಬಳಿ
ಹೆರ್ಗ, ಉಡುಪಿ ತಾಲೂಕು – 576 107
ಮೊ.: 9606044893

### ಸೇವಾ ಕೇಂದ್ರ :

ಸೇವಾಧಾಮ
(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)
ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ
ಕೊಕ್ಕಡ ಗ್ರಾಮ – 574 198
ಮೊ.: 94482 54888

## ನಮ್ಮ ತಂಡ

ಶ್ರೀ ಕೆ. ವಿನಾಯಕ ರಾವ್ – ಅಧ್ಯಕ್ಷರು
ಶ್ರೀ ಕೆ. ಯು. ಗಿರೀಶ್ ರಾವ್ – ಉಪಾಧ್ಯಕ್ಷರು
ಶ್ರೀಮತಿ ಸ್ವರ್ಣಗೌರಿ – ಕಾರ್ಯದರ್ಶಿ
ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್ – ಖಜಾಂಚಿ
ಶ್ರೀ ಕೆ. ಬಾಲಕೃಷ್ಣ – ಟ್ರಸ್ಟಿ

## ಸಲಹಾ ಮಂಡಳಿ

ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
ಶ್ರೀಮತಿ ಮನೋರಮ ಭಟ್
ಶ್ರೀ ಉದಯಶಂಕರ್
ಶ್ರೀ ಹರೀಶ್ ಟಿ. ಪಿ.
ಶ್ರೀ ಗೋಪಾಲ ಕೆ. ವಿ.
ಶ್ರೀ ವಿಷ್ಣು ಪ್ರಸಾದ್ ತೆಂಕಿಲ್ಲಾಯ
ಶ್ರೀಮತಿ ಜೊಯ್ಸ್ ಪಿರೇರಾ

## ಸಂಚಾಲಕರು

ಶ್ರೀ ಕೆ. ಪುರಂದರ ರಾವ್

## ನಿರ್ದೇಶಕರು

ಶ್ರೀ ರಾಯನ್ ಫೆರ್ನಾಂಡಿಸ್
ಶ್ರೀ ವಿಜಯ ಕೊಡವೂರು
ಡಾ. ಮುರಳೀಧರ ನಾಯಕ್

# ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಸುಳ್ಯದಲ್ಲಿ ಉಚಿತ ವೈದ್ಯಕೀಯ ಆರೋಗ್ಯ ತಪಾಸಣೆ ಮತ್ತು ಮಾಹಿತಿ ಶಿಬಿರ





ಸುಳ್ಯ: ಸೇವಾಭಾರತಿ ಬೆಳ್ತಂಗಡಿ ತಾಲೂಕು ಇದರ ಸೇವಾಧಾಮದ ಸಹಯೋಗದಲ್ಲಿ ರೋಟರಿಕ್ಲಬ್‌ಗಳ, ಕರ್ನಾಟಕ ಫ್ರೆಂಡ್ಸ್ ಸುಳ್ಯ, ಕೆ.ವಿ.ಜಿ.ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ, ಸುಳ್ಯ, ಎ.ಪಿ.ಡಿ.ಬೆಂಗಳೂರು, ಇವುಗಳ ಜಂಟಿ ಆಶ್ರಯದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನವಂಬರ್ 16 ಬುಧವಾರ ಮತ್ತು 17 ಗುರುವಾರದಂದು ಎರಡು ದಿನಗಳ ಉಚಿತ ವೈದ್ಯಕೀಯ ಆರೋಗ್ಯ ತಪಾಸಣಾ ಮತ್ತು ಮಾಹಿತಿ ಶಿಬಿರವು, ಸುಳ್ಯದ ಕೆ.ವಿ.ಜಿ.ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ನಡೆಯಿತು.

ಕೆ.ವಿ.ಜಿ.ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ, ಸುಳ್ಯ ಇದರ ಡೀನ್‌ರಾದ ಡಾ.ಸತ್ಯವತಿ ಆಳ್ವರವರು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಶಿಬಿರಾರ್ಥಿಗಳಿಗೆ ಶುಭ ಹಾರೈಸಿದರು. ಸೇವಾಭಾರತಿಯ ಅಧ್ಯಕ್ಷರು ಹಾಗೂ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ.ವಿನಾಯಕ ರಾವ್‌ರವರು ಸೇವಾಭಾರತಿ ಸೇವಾಧಾಮದ ಕಾರ್ಯಚಟುವಟಿಕೆಗಳ ಬಗ್ಗೆ ಸವಿಸ್ತಾರವಾದ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕೆ.ವಿ.ಜಿ.ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ, ಸುಳ್ಯ ಇಲ್ಲಿನ ಹೆಚ್.ಓ.ಡಿ. ಮತ್ತು ಮೂಳೆ ತಜ್ಞರಾದ ಡಾ. ರಂಗನಾಥರವರು ಬೆನ್ನುಹುರಿ ಅಪಘಾತದ ನಿರ್ವಹಣೆ ಮತ್ತು ದ್ವಿತೀಯಾಂತರ ಸಮಸ್ಯೆಗಳ ಬಗ್ಗೆ ಶಿಬಿರಾರ್ಥಿಗಳಿಗೆ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಮಾಹಿತಿ ನೀಡಿ ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕೆಂದು ನುಡಿದರು. ಕೆ.ವಿ.ಜಿ.ಮೆಡಿಕಲ್ ಕಾಲೇಜ್ ಮತ್ತು ಆಸ್ಪತ್ರೆ, ಸುಳ್ಯ ಇದರ ಡೈನಕಾಲೋಜಿಸ್ಟ್ ವಿಭಾಗ ಸೀನಿಯರ್ ಪ್ರೊಫೆಸರ್ ಮತ್ತು ಹೆಚ್.ಓ.ಡಿ.ಯಾದ ಡಾ. ಗೀತಾ ದೊಪ್ಪರವರು ಸುಳ್ಯ ತಾಲೂಕಿನ ಎಲ್ಲಾ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರು ಇಂತಹ ಶಿಬಿರದಲ್ಲಿ ಪಾಲ್ಗೊಂಡು ತಮ್ಮ ಆರೋಗ್ಯ ತಪಾಸಣೆ ಸಮಸ್ಯೆಗಳಿಗೆ ಪರಿಹಾರ ವೈದ್ಯಕೀಯ ಸಲಹೆ ಪಡೆಯಬೇಕು, ಎಲ್ಲರೂ ಅರೋಗ್ಯವಂತರಾಗಬೇಕು ಎಂದು ಹಾರೈಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಯಾದ ರೋಟರಿ ಕ್ಲಬ್, ಸುಳ್ಯದ ಪ್ರೆಸಿಡೆಂಟ್ ಆದ ಆನಂದ ಖಂಡಿಗರವರು ಒತ್ತಡಗಾಯಕ್ಕೆ ಒಳಗಾದ ಬೆನ್ನುಹುರಿ ಅಪಘಾತಕ್ಕೆ ಒಳಗಾದ ಶಿಬಿರಾರ್ಥಿಗಳಿಗೆ ಮೆಡಿಕಲ್ ಕಿಟ್ ಹಸ್ತಾಂತರಿಸಿ ಸೇವಾಭಾರತಿ ಸೇವಾಧಾಮವು ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರಂತರವಾಗಿ ನೀಡುವ ಸಹಾಯಹಸ್ತ ಮತ್ತು ಸೌಲಭ್ಯಗಳಿಗೆ ಶ್ಲಾಘನೆ ವ್ಯಕ್ತಪಡಿಸಿ ಮುಂದೆಯೂ ರೋಟರಿ ಕ್ಲಬ್ ಸುಳ್ಯ ವತಿಯಿಂದ ಸಹಕಾರ ನೀಡುತ್ತೇವೆ ಎಂದು ತಿಳಿಸಿದರು. ಶಿಬಿರದಲ್ಲಿ ಅನೇಕ ಸಂಘಸಂಸ್ಥೆಗಳ ಗಣ್ಯರು, ಆಸ್ಪತ್ರೆಯ ಸಿಬ್ಬಂದಿಗಳು, ಶಿಬಿರಾರ್ಥಿಗಳು ಮತ್ತು ಅವರ ಪೋಷಕರು ಹಾಗೂ ಸೇವಾಭಾರತಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಸೇವಾಭಾರತಿಯ ಸಿಬ್ಬಂದಿ ದಕ್ಷಿಣ ಕನ್ನಡ ಜಿಲ್ಲೆಯ ಹಿರಿಯ ಕ್ಷೇತ್ರ ಸಂಯೋಜಕರಾದ ಅಖಿಲೇಶ್.ಎ. ಇವರು ಕಾರ್ಯಕ್ರಮವನ್ನು ಸ್ವಾಗತಿಸಿ ನಿರೂಪಿಸಿದರು. ಸೇವಾಧಾಮದ ಪಿಯರ್‌ಟ್ರೈನರ್ ಆದ ಮೋಹನ್.ಕೆ ಅರಿಯಡ್ಕ ಇವರು ಧನ್ಯವಾದವಿತ್ತರು.

## ಸ್ವಉದ್ಯೋಗ ಯೋಜನೆಗಾಗಿ ಬೆಂಗಳೂರಿನ ಗಿಫ್ಟ್ ಏಬಲ್ಡ್ ಮತ್ತು ಸೇವಾಭಾರತಿ ಒಡಂಬಡಿಕೆ

ಸೇವಾಭಾರತಿಯ ಸೇವಾಧಾಮದಲ್ಲಿ ನೊಂದಾಯಿತರಾದ ಅರ್ಹ ದಿವ್ಯಾಂಗರಿಗೆ ಆರ್ಥಿಕ ಸ್ವಾವಲಂಬಿತನಕ್ಕಾಗಿ ಸ್ವ ಉದ್ಯೋಗ ಯೋಜನೆಯಡಿ ಜೇನುಕೃಷಿಗಾಗಿ ಬೆಂಗಳೂರಿನ ಗಿಫ್ಟ್ ಏಬಲ್ಡ್ ಸಂಸ್ಥೆಯೊಂದಿಗೆ ಒಡಂಬಡಿಕೆ ಪತ್ರಕ್ಕೆ ಸಂಸ್ಥೆಗಳ ಪ್ರಮುಖರು ಸಹಿ ಮಾಡಿ ಯೋಜನೆಯ ಅನುಷ್ಠಾನಕ್ಕೆ ಶುಭ ಮುನ್ನುಡಿಯಿಟ್ಟರು.

ಈಗಾಗಲೇ ಈ ಯೋಜನೆಯಡಿ 35 ಫಲಾನುಭವಿಗಳಿಗೆ ಒಟ್ಟು 124 ಜೇನು ಕುಟುಂಬ ಹಾಗೂ ಪೆಟ್ಟಿಗೆಗಳನ್ನು ನೀಡಿ ಅವರಿಗೆ ತರಬೇತಿ ಮತ್ತು ಅದಕ್ಕೆ ಬೇಕಾಗುವ ಸಾಧನ ಸಲಕರಣೆಗಳನ್ನು ನೀಡಲಾಗಿದೆ. ಈ ಯೋಜನೆಯು 5 ತಿಂಗಳ ಸಮಯಾವಕಾಶದಲ್ಲಿ ಅನುಷ್ಠಾನಗೊಳ್ಳಬೇಕಿದ್ದು, ಯೋಜನೆಯಡಿ 5 ಲಕ್ಷದ 41 ಸಾವಿರದಷ್ಟು ಖರ್ಚಾಗಲಿದ್ದು, ಫಲಾನುಭವಿಗಳಿಗೆ ಉತ್ತಮ ಯೋಜನೆಯಾಗಿದೆ. ಅಲ್ಲದೆ 5 ಮಂದಿಗೆ ರ್‍ಯಾಂಪ್ ನಿರ್ಮಾಣಕ್ಕಾದ ಖರ್ಚುಗಳೂ ಈ ಯೋಜನೆಯಡಿ ಸೇರಿವೆ. ಚಿಕ್ಕಮಗಳೂರು, ಉಡುಪಿ, ದಕ್ಷಿಣ ಕನ್ನಡದ ಫಲಾನುಭವಿಗಳು ಇದರಡಿ ಸೇರಿಕೊಂಡಿದ್ದು, ಕಳೆದ ವರ್ಷವೂ 35 ಮಂದಿ ಫಲಾನುಭವಿಗಳು ಇದರ ಪ್ರಯೋಜನ ಪಡೆದಿರುತ್ತಾರೆ.

ಈ ತರಬೇತಿಯು ಓರ್ವ ಫಲಾನುಭವಿ ದಿವ್ಯಾಂಗರಿಗೆ ಮತ್ತು ಇಬ್ಬರು ಪೋಷಕರಿಗೂ ಲಭ್ಯವಿರುವುದು ಉಲ್ಲೇಖನೀಯ ಸಂಗತಿ.

## ಜೀವನೋಪಾಯ ತರಬೇತಿ ಕಾರ್ಯಾಗಾರ





ಸೇವಾಧಾಮದ ಸನಿವಾಸಿಗಳ ಮುಂದಿನ ಜೀವನದ ಜೀವನೋಪಾಯಕ್ಕಾಗಿ ಪುಷ್ಟಿ ನೀಡುವ ಸಲುವಾಗಿ ಸೇವಾಧಾಮದಲ್ಲಿ ದಿನಾಂಕ 04–11–2022ರಂದು ಸೇವಾಭಾರತಿಯ ಸ್ವಉದ್ಯೋಗ ಸಂಯೋಜಕರಾದ ಅಖಿಲೇಶ್‌ರವರು ಎಲ್ಲಾ ಫಲಾನುಭವಿಗಳಿಗೆ (ಕಪ್‌ಸೀಲಿಂಗ್) ಜ್ಯೂಸ್ ಮತ್ತು ಪಾಪ್‌ಕಾರ್ನ್ ತಯಾರಿಸಿ ಅದನ್ನು ಕಪ್‌ನಲ್ಲಿ ತುಂಬಿಸಿ ಸೀಲ್ ಮಾಡುವುದು ಹಾಗೂ ಅದನ್ನು ಮಾರುಕಟ್ಟೆಯಲ್ಲಿ ಹೇಗೆ, ಯಾರಿಗೆ ಮಾರಾಟ ಮಾಡಬೇಕು ಎಂಬುವುದರ ಬಗ್ಗೆ ಮಾಹಿತಿಯನ್ನು ನೀಡಿದರು.

## ಶಾಸಕದ್ವಯರ ಪ್ರಯತ್ನದಲ್ಲಿ ಸೇವಾಭಾರತಿ ಸಂಸ್ಥೆಗೆ ಜಮೀನು ಮಂಜುರಾತಿ

ಸೇವಾಭಾರತಿ ಸಂಸ್ಥೆಗೆ ಧರ್ಮಸ್ಥಳ ಗ್ರಾಮದ ಕನ್ಯಾಡಿಯಲ್ಲಿ 10 ಸೆಂಟ್ಸ್ ಜಾಗವನ್ನು 03.11.22 ರಂದು ನಡೆದ ಸಚಿವ ಸಂಪುಟ ಸಭೆಯು ಮಂಜೂರು ಮಾಡಿರುತ್ತದೆ.

ಸಮಾಜಮುಖಿ ಚಟುವಟಿಕೆಗಳ ಉತ್ತೇಜಿಸುವ ಹಿತದೃಷ್ಟಿಯಿಂದ ಮಂಜೂರಾದ ಜಮೀನಿನಲ್ಲಿ ಕಟ್ಟಡವನ್ನು ಕಟ್ಟಿ, ಆ ಮೂಲಕ ಇನ್ನಷ್ಟು ಸೇವಾಕಾರ್ಯಗಳ ವಿಸ್ತಾರಕ್ಕಾಗಿ ಸಂಸ್ಥೆಯು ಯೋಜನೆಗಳನ್ನು ಸಿದ್ಧಪಡಿಸಿಕೊಂಡಿದೆ.

ಮಂಜೂರಾತಿಗೆ ಶ್ರಮಿಸಿದ ವಿಧಾನಸಭಾ ಸದಸ್ಯರಾದ ಹರೀಶ್ ಪೂಂಜ, ವಿಧಾನ ಪರಿಷತ್‌ಸದಸ್ಯರಾದ ಕೆ.ಪ್ರತಾಪ್‌ಸಿಂಹ ನಾಯಕರಿಗೆ ಸಂಸ್ಥೆಯು ಅಭಿನಂದನೆಗಳನ್ನು ವ್ಯಕ್ತಪಡಿಸಿದೆ.

## ಲಯನ್ಸ್ ಕ್ಲಬ್ ವತಿಯಿಂದ ಅಧ್ಯಕ್ಷರಿಗೆ ಸನ್ಮಾನ




ನವೆಂಬರ್ 27 ರಂದು "ಪ್ರಾಂತೀಯ ಸಮ್ಮೇಳನ"ದ ಸಂದರ್ಭದಲ್ಲಿ ಲಯನ್ಸ್ ಕ್ಲಬ್ ಇಂಟರ್ ನ್ಯಾಷನಲ್ ಡಿಸ್ಟ್ರಿಕ್ 317ರ ವತಿಯಿಂದ ಅಂಗವಿಕಲರ ಕ್ಷೇತ್ರದ ಅತ್ಯುತ್ತಮ ಸೇವೆಗಳಿಗಾಗಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಕೆ.ವಿನಾಯಕ ರಾವ್ ಸನ್ಮಾನ ಸ್ವೀಕರಿಸಿದರು.

## ದಾನಿಗಳು

### ತುಳುಕೂಟದಿಂದ ರೂಪಾಯಿ 1 ಲಕ್ಷದ ಕೊಡುಗೆ

ದೀಪಾವಳಿ ಆಚರಣೆ ಪ್ರಯುಕ್ತ ತುಳುಕೂಟ ಕುವೈಟ್ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ಆಮಂತ್ರಿತರಾಗಿ ಭಾಗವಹಿಸಿದ ಶ್ರೀ ರಾಯನ್ ಫೆರ್ನಾಂಡಿಸ್‌ರವರ ಮೂಲಕ ಸೇವಾಧಾಮದ ಕಾರ್ಯ ಚಟುವಟಿಕೆಗಳಿಗೆ 1 ಲಕ್ಷ ರೂಪಾಯಿ ಸಹಾಯವನ್ನು ತುಳುಕೂಟವು ಕೊಡುಗೆಯಿತ್ತಿದೆ. ಈ ಚೆಕ್ಕನ್ನು ದಿನಾಂಕ 17–11–2022 ರಂದು ಕನ್ಯಾಡಿಯಲ್ಲಿ ನಡೆದ ಭೋಗನ್ ವಿಲ್ಲಾದ ಉದ್ಘಾಟನಾ ಸಮಾರಂಭದಲ್ಲಿ ಶ್ರೀ ರಾಯನ್ ಫೆರ್ನಾಂಡಿಸ್‌ರವರು ಸೇವಾಧಾಮದ ಸಂಚಾಲಕರಾದ ಪುರಂದರರಾವ್‌ರವರಿಗೆ ಹಸ್ತಾಂತರಿಸಿದರು.

### ಲಾಡ್ಜ್ ಉದ್ಘಾಟನಾ ಸಮಾರಂಭದಲ್ಲಿ ಸೇವಾಧಾಮಕ್ಕೆ ಧನ ಸಹಾಯ



ಧರ್ಮಸ್ಥಳ ಗ್ರಾಮದ ಕನ್ಯಾಡಿ ನಿವಾಸಿ ಕೆ.ವಿಷ್ಣುಮೂರ್ತಿ ರಾವ್ ಕುಟುಂಬವು ಕನ್ಯಾಡಿ ಶ್ರೀರಾಮ ಮಂದಿರದ ಹಿಂಭಾಗದಲ್ಲಿ ನಿರ್ಮಿಸಿದ ಭೋಗನ್ ವಿಲ್ಲಾ ರೆಸಿಡೆನ್ಸಿ ಇದರ ಉದ್ಘಾಟನಾ ಸಮಾರಂಭವು ದಿನಾಂಕ 17–11–2022 ರಂದು ನಡೆಯಿತು.

ಈ ಸರಳ ಸಮಾರಂಭದಲ್ಲಿ ಮಾಲಕರಾದ ಕೆ.ವಿಷ್ಣು ಮೂರ್ತಿರಾವ್ ಕುಟುಂಬವು ಸೇವಾಧಾಮದ ನಿರ್ವಹಣೆಗೋಸ್ಕರ ರೂಪಾಯಿ 50 ಸಾವಿರವನ್ನು ಸೇವಾಧಾಮದ ಸಂಚಾಲಕರಾದ ಕೆ.ಪುರಂದರ ರಾವ್‌ರವರಿಗೆ ಹಸ್ತಾಂತರಿಸಿದರು. ಸಹಾಯ ಧನಗಳನ್ನು ಸ್ವೀಕರಿಸಿ ಮಾತನಾಡಿದ ಪುರಂದರ ರಾವ್‌ರಂತಹ ಶುಭಸಮಾರಂಭಗಳಲ್ಲಿ ಸಮಾಜದಲ್ಲಿರುವ ಅಶಕ್ತರಿಗೆ ನೆರವಾಗುವಂಥ ಸಹಾಯಹಸ್ತಗಳು ನಡೆಯುವ ಕಾಯಕ ನಿರಂತರವಾಗಿ ಸಾಗುತ್ತಿರಬೇಕೆಂದು ಆಶಿಸಿದರು. ಎಸ್.ಎಲ್.ವಿ. ಇಂಜಿನಿಯರ್ ಶ್ರೀ ಸಂಪತ್‌ರತ್ನ ರಾವ್ ಮತ್ತು ಬೆಂಗಳೂರಿನ LIC ಉದ್ಯೋಗಿ ಶ್ರೀಮತಿ ನಿರ್ಮಲಾರವರು ತಲಾ ರೂ. 25,000 ಸೇವಾಕಾರ್ಯಗಳಿಗೆ ಧನ ಸಹಾಯವಿತ್ತರು. ಈ ಸಮಾರಂಭದಲ್ಲಿ ಮುತ್ಸದ್ದಿ, ಭುಜಬಲಿ ಧರ್ಮಸ್ಥಳ ಇವರು ಉಪಸ್ಥಿತರಿದ್ದು ಸೇವಾಕಾರ್ಯಗಳ ಬಗ್ಗೆ ಸಂತೋಷ ವ್ಯಕ್ತಪಡಿಸಿ ದಾನಿಗಳಿಗೆ ಶುಭಹಾರೈಸಿದರು.

### ನವೆಂಬರ್ ತಿಂಗಳಿನಲ್ಲಿ ದೇಣಿಗೆ ನೀಡಿದ ಸಂಘ ಸಂಸ್ಥೆಗಳು

| | | |
|---|---|---|
| ಗಿಫ್ಟ್ ಏಬಲ್ಡ್ ಫೌಂಡೇಶನ್, ಬೆಂಗಳೂರು | – | 5,41,000/– |
| ಅಸೋಶಿಯೇಶನ್ ಪೀಪಲ್ಸ್ ವಿತ್ ಡಿಸೆಬಿಲಿಟಿ, (ಎ.ಪಿ.ಡಿ) ಬೆಂಗಳೂರು | – | 2,47,500/– |
| ತುಳುಕೂಟ ಕುವೈಟ್ | – | 1,00,000/– |
| ಪಡುಬಿದ್ರಿ ಕೋ ಆಪರೇಟಿವ್ ಅಗ್ರಿಕಲ್ಚರಲ್ ಸೊಸೈಟಿ (ನಿ) | – | 50,000/– |
| ದಿವ್ಯಾಂಗ ರಕ್ಷಣಾ ಸಮಿತಿ, ಕೊಡವೂರು | – | 16,000/– |
| ರೋಟರಿ ಕ್ಲಬ್, ಸುಳ್ಯ | – | 10,000/– |
| ಕರ್ನಾಟಕ ಪ್ಲೈವುಡ್, ಸುಳ್ಯ | – | 5,000/– |

### ಮಹನೀಯದಾನಿಗಳು

| | | |
|---|---|---|
| ಶ್ರೀ ಕೃಷ್ಣ ಜಿ.ಕೋಟ್ಯಾನ್, ಕೊಡವೂರು | – | 54,000/– |
| ಶ್ರೀ ಸಂಪತ್‌ರತ್ನ ರಾವ್, ಉಜಿರೆ | – | 25,000/– |
| ಶ್ರೀಮತಿ ನಿರ್ಮಲ ಜಿ.ಆರ್., ಬೆಂಗಳೂರು | – | 25,000/– |
| ಡಾ. ಮಹೇಶ ಕೆ., ಮಂಗಳೂರು | – | 20,000/– |
| ಶ್ರೀ ಪ್ರಭಾಕರ ಹೆಗ್ಡೆ, ಉಜಿರೆ | – | 15,000/– |
| ಕು. ಎಲ್ವಿಶಿಯ ಡಿ ಅಲ್ಮೇಡಾ, ಉಡುಪಿ | – | 12,000/– |
| ಶ್ರೀಮತಿ ಎಂ.ರಾಧಿಕಾ ಪ್ರಭು, ಕನ್ಯಾಡಿ | – | 10,000/– |
| ಶ್ರೀ ವೈಭವ್ ವಿ. ರಾವ್ ಮುಂಬೈ | – | 10,000/– |
| ಶ್ರೀ ಅರವಿಂದ ಕೆ., ಮಂಗಳೂರು | – | 10,000/– |
| ಶ್ರೀ ವೆಂಕಟೇಶ್ ಡಿ. ಬೆಂಗಳೂರು | – | 10,000/– |
| ಶ್ರೀ ಸುಧೀರ್ ರಾವ್, ಮುಂಬೈ | – | 5,000/– |
| ಶ್ರೀ ಧರ್ಶಿಕ್ ರಾಜ್, ಬೆಂಗಳೂರು | – | 5,000/– |

### ಸೇವಾನಿಧಿ ದಾನಿಗಳು

| | | |
|---|---|---|
| ಶ್ರೀ ಮಧ್ವಮೂರ್ತಿ ಪಿ., ಧಾನ್ಯಲಕ್ಷ್ಮಿ ರೈಸ್‌ಮಿಲ್, ಉಡುಪಿ | – | 5,000/– |
| ಶ್ರೀ ವೆಲೇರಿಯನ್ ಡೆಲ್ಮೆಡಾ, ಮಂಗಳೂರು | – | 2,500/– |
| ಶ್ರೀಮತಿ ಶಾಂತಕುಮಾರಿ, ಪಂಚವಟಿ, ಕನಕದುರ್ಗ, ಉಜಿರೆ | – | 2,000/– |
| ಶ್ರೀ ಶ್ರೀಧರ್ ಕೆ.ವಿ., ಸುರಕ್ಷಾ ಮೆಡಿಕಲ್ಸ್, ಉಜಿರೆ | – | 1000/– |
| ಶ್ರೀ ಗುರುರಾಜ್, ಶ್ರೀರಾಮ್ ಅರ್ಥ್‌ಮೂವರ್ಸ್, ಕನ್ಯಾಡಿ | – | 1000/– |
| ಶ್ರೀ ಸೂರ್ಯನಾರಾಯಣ ರಾವ್ ದೊಂಡೋಲೆ, ಧರ್ಮಸ್ಥಳ | – | 1,000/– |
| ಡಾ. ರಾಮಕೃಷ್ಣ ಭಟ್ ಜಿ.ಎನ್, ಕನ್ಯಾಡಿ | – | 1,000/– |
| ಶ್ರೀ ಚಿತ್ರೇಶ್ ಶೆಟ್ಟಿ, ಸ್ವಪ್ನ ಹೋಟೆಲ್, ಉಜಿರೆ | – | 1,000/– |
| ಶ್ರೀಮತಿ ಸ್ವರ್ಣಗೌರಿ, ಜೋಡುಸ್ಥಾನ, ಧರ್ಮಸ್ಥಳ | – | 500/– |
| ಶ್ರೀಮತಿ ಬಬಿತಾ, ಕನ್ಯಾಡಿ | – | 500/– |
| ಶ್ರೀಮತಿ ಛಾಯ ಸಿ.ಎಸ್, ಉಜಿರೆ | – | 500/– |
| ಶ್ರೀಕಾರ್ತಿಕ್ ಕೆ, ಮಂಜುನಾಥ ಬೇಕರಿ, ಧರ್ಮಸ್ಥಳ | – | 500/– |
| ಶ್ರೀ ಪುರುಷೋತ್ತಮ, ಮೂಡಂಗಲ್, ಧರ್ಮಸ್ಥಳ | – | 500/– |
| ಮಾ। ಅದ್ವೈತ್, ರಾಮ ಗೌರಿನಿವಾಸ, ಕನ್ಯಾಡಿ ॥ | – | 500/– |
| ಶ್ರೀ ಮಧುಸೂದನ್, ಎಂ.ಜಿ.ಟ್ರೇಡರ್ಸ್, ಉಜಿರೆ | – | 500/– |
| ಶ್ರೀ ಬಿ.ಕೃಷ್ಣಪ್ಪ ಗುಡಿಗಾರ್, ಕಲ್ಮಂಜ | – | 500/– |
| ಶ್ರೀ ಸುನಿಲ್ ಕುಮಾರ್ ಜೈನ್, ದೊಂಡೋಲೆ, ಧರ್ಮಸ್ಥಳ | – | 400/– |
| ಶ್ರೀ ರಜತ್ ಕುಮಾರ್ ಜೆ.ಡಿ., ವೇಣೂರು | – | 300/– |
| ಶ್ರೀ ಜಯಾನಂದ ಮಲ್ಯಾಳ, ಕನ್ಯಾಡಿ | – | 250/– |
| ಶ್ರೀ ಬಿ.ಪುರಂದರ ನಾರ್ಯ, ಧರ್ಮಸ್ಥಳ | – | 200/– |

*When everyone else says you can't determination says, YES YOU CAN'*

## ಕೃಷ್ಣಕೋಟ್ಯಾನ್‌ರಿಂದ 54 ಸಾವಿರ ರೂಪಾಯಿ ದೇಣಿಗೆ




ಉಡುಪಿಯ ಸಾಮಾಜಿಕ ಕಾರ್ಯಕರ್ತ ಕೊಡುಗೈ ದಾನಿಯಾದ ಕೃಷ್ಣಕೋಟ್ಯಾನ್‌ರವರು ಉಡುಪಿಯಲ್ಲಿ ನವೆಂಬರ್ 07 ರಂದು ನಡೆದ ಕರಾಟೆ ಚಾಂಪಿಯನ್‌ಶಿಪ್ ಸಮಾರಂಭದಲ್ಲಿ ಸೇವಾಧಾಮ ಪುನಃಶ್ಚೇತನ ಕೇಂದ್ರದಲ್ಲಿ ನೊಂದಾಯಿತರಾದ ಉಡುಪಿ ಜಿಲ್ಲೆಯ ನಿವಾಸಿಗಳಾದ ನಾಲ್ವರು ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ ನಾಲ್ಕು ಗಾಲಿಕುರ್ಚಿಗಳನ್ನು ಕೊಡುಗೆಯಾಗಿ ನೀಡಿದರು. ಈ ನಾಲ್ಕು ಗಾಲಿಕುರ್ಚಿಗಳ ಬಾಬ್ತು ರೂಪಾಯಿ 54 ಸಾವಿರವನ್ನು ನಮ್ಮ ಸಂಸ್ಥೆಗೆ ಹಸ್ತಾಂತರಿಸಿದರು.

## ಪಡುಬಿದ್ರೆ ಸಹಕಾರಿ ವ್ಯವಸಾಯಿಕ ಸೊಸೈಟಿಯಿಂದ ರೂಪಾಯಿ 50 ಸಾವಿರ ದೇಣಿಗೆ



69ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ಪಡುಬಿದ್ರೆ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಹಳೇ ವಿದ್ಯಾರ್ಥಿ ಸಂಘ, ಗಣಪತಿ ಪ್ರೌಢಶಾಲೆಗಳ ಜಂಟಿ ಆಶ್ರಯದಲ್ಲಿ ನಡೆದ ವೈದ್ಯಕೀಯ ಶಿಬಿರ ಹಾಗೂ ಶೀತಲೀಕೃತ ಶವಗಾರದ ಉದ್ಘಾಟನೆ ಸಮಾರಂಭದಲ್ಲಿ ಪಡುಬಿದ್ರೆ ಸಹಕಾರಿ ವ್ಯವಸಾಯನಿಕ ಸೊಸೈಟಿ ಅಧ್ಯಕ್ಷರಾದ ಸಿ.ವೈ.ಸುಧೀರ್ ಕುಮಾರ್ ನೇತೃತ್ವದಲ್ಲಿ ಸೇವಾಧಾಮ ಕಾರ್ಯ ಚಟುವಟಿಕೆಗಳಿಗಾಗಿ ರೂಪಾಯಿ 50 ಸಾವಿರದ ಚೆಕ್ಕನ್ನು ಸ್ಥಳೀಯ ಶಾಸಕರಾದ ಲಾಲಾಜಿ ಮೆಂಡನ್‌ರವರು ಸೇವಾಭಾರತಿಯ ಅಧ್ಯಕ್ಷರಾದ ಕೆ.ವಿನಾಯಕ ರಾವ್‌ರಿಗೆ ಹಸ್ತಾಂತರಿಸಿದರು.

ದಿನಾಂಕ 19.11.2022 ರಂದು ನಡೆದ ಈ ಕಾರ್ಯಕ್ರಮದಲ್ಲಿ ಸ್ಥಳೀಯ ಪ್ರಮುಖರು ಭಾಗವಹಿಸಿದ್ದರು.

### ಕೇಂದ್ರಕ್ಕೆ ಭೇಟಿ

## ರಾಯನ್ ಫೆರ್ನಾಂಡೀಸ್‌ರಿಂದ ಸೇವಾಧಾಮದ ಭೇಟಿ






ದಿನಾಂಕ 19.11.2022 ರಂದು ಸೇವಾಧಾಮದ ನಿರ್ದೇಶಕರಾದ ಉಡುಪಿಯ ರಾಯನ್ ಫೆರ್ನಾಂಡಿಸ್‌ರವರು ಸೇವಾಧಾಮಕ್ಕೆ ಭೇಟಿ ನೀಡಿ ಸನಿವಾಸಿಗಳಿಗೆ ದಿವ್ಯಾಂಗತೆಯ ಬಗ್ಗೆ ಮತ್ತು ಅವರು ಎದುರಿಸುತ್ತಿರುವ ಮಲ–ಮೂತ್ರ ನಿರ್ವಹಣೆಯ ಬಗ್ಗೆ ಮಾಹಿತಿ ನೀಡಿದರು.

## ಸೇವಾಧಾಮ ಪುನಃಶ್ಚೇತನ ಕೇಂದ್ರಕ್ಕೆ ಡಾ. ಮಹೇಶ ಕೆ. ಭೇಟಿ



ನವೆಂಬರ್ 28 ರಂದು ಮಂಗಳೂರಿನ ಖ್ಯಾತ ಬೆನ್ನುಮೂಳೆ ಹಾಗೂ ಬೆನ್ನುಹುರಿ ತಜ್ಞರಾದ ಡಾ. ಮಹೇಶ ಕೆ. ಸೇವಾಧಾಮ ಪುನಃಶ್ಚೇತನ ಕೇಂದ್ರಕ್ಕೆ ಭೇಟಿನೀಡಿ ಸೇವಾಭಾರತಿ –ಸೇವಾಧಾಮ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆದುಕೊಂಡರು ಹಾಗೂ ರೂ.20,000/–ವನ್ನು ದೇಣಿಗೆ ನೀಡಿದರು. ಈ ಸಂದರ್ಭ ಸಂಸ್ಥೆಯ ಅಧ್ಯಕ್ಷರಾದ ಕೆ.ವಿನಾಯಕ ರಾವ್ ಉಪಸ್ಥಿತರಿದ್ದರು.

## ತರಿಕೆರೆಯಲ್ಲಿ ಮಾಹಿತಿ ಕಾರ್ಯಾಗಾರ




ರೋಟರಿ ಕ್ಲಬ್‌ನ 22 ಸದಸ್ಯರಿಗಾಗಿ ಬೆನ್ನುಹುರಿ ಅಪಘಾತ ಮತ್ತು ನಿರ್ವಹಣೆ ಹಾಗೂ ಪುನಶ್ಚೇತನದ ಬಗ್ಗೆ ದಿನಾಂಕ 10.11.2022 ರಂದು ಕಾರ್ಯಗಾರವನ್ನು ಹಮ್ಮಿಕೊಳ್ಳಲಾಯಿತು. ಚಿಕ್ಕಮಗಳೂರು ಜಿಲ್ಲಾ ಕ್ಷೇತ್ರ ಸಂಯೋಜಕರಾದ ಆಶ್ರೀತ ಸಿ.ಪಿ.ಯವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು. ಮುಂಬರುವ ಆರೋಗ್ಯ ಶಿಬಿರ ಹಾಗೂ ಸಾಧನ ಸಲಕರಣೆಗಾಗಿ ಸಹಾಯಹಸ್ತ ನೀಡುವಂತೆ ಕೋರಲಾಯಿತು.

## ಕುಮಟಾದಲ್ಲಿ ಎರಡು ಮಾಹಿತಿ ಕಾರ್ಯಗಾರ



ಕುಮಟಾದಲ್ಲಿರುವ ಕೆನರಾ ಎಕ್ಸಲೆನ್ಸ್ ಸ್ಕೂಲ್‌ನ ವಿದ್ಯಾರ್ಥಿಗಳಿಗಾಗಿ 01.11.22 ರಂದು ಬೆನ್ನುಹುರಿ ಅಪಘಾತ ಮತ್ತು ಅದರ ನಿರ್ವಹಣೆ ಹಾಗೂ ಪುನಶ್ಚೇತನದ ಕುರಿತು ಕಾರ್ಯಗಾರವನ್ನು ಏರ್ಪಡಿಸಲಾಗಿತ್ತು. ಶಾಲೆಯ 127 ಮಂದಿ ವಿದ್ಯಾರ್ಥಿಗಳ ಸಹಿತ ಅಧ್ಯಾಪಕ ವೃಂದ ಇದರಲ್ಲಿ ಭಾಗವಹಿಸಿದ್ದರು.

ಈ ಕೇಂದ್ರವು ಡಾಕ್ಟರ್ ಜಿ.ಜಿ.ಹೆಗ್ಗಡೆಯವರ ನೇತೃತ್ವದಲ್ಲಿ ನಿರ್ವಹಿಸುವುದಾಗಿದ್ದು ಅವರು ಸೇವಾಭಾರತಿಯ ಸೇವಾಕಾರ್ಯಗಳಿಗೆ ಬೆಂಬಲ ನೀಡಿರುವುದು ಉಲ್ಲೇಖನೀಯ ಸಂಗತಿ.

ಸಂಪನ್ಮೂಲ ವ್ಯಕ್ತಿಗಳಿಗಾಗಿ ಸಿಬ್ಬಂದಿಗಳಾದ ಮನು ಮತ್ತು ಪುರುಷೋತ್ತಮ ಭಾಗವಹಿಸಿದ್ದರು. ಕುಮಟಾ ಲಯನ್ಸ್ ಕ್ಲಬ್‌ನ ಸದಸ್ಯರಿಗಾಗಿಯೂ ಮಾಹಿತಿ ಕಾರ್ಯಗಾರವನ್ನು ಏರ್ಪಡಿಸಿದ್ದು 20 ಮಂದಿ ಭಾಗವಹಿಸಿರುತ್ತಾರೆ.

## ಸೇವಾಧಾಮಕ್ಕೆ ಸಕ್ಷಮ ಬೆಂಗಳೂರು ತಂಡ ಭೇಟಿ




ನವೆಂಬರ್ 23ರಂದು ಸಕ್ಷಮ ಬೆಂಗಳೂರು ಗ್ರಾಮಾಂತರ ಇದರ ಕಾರ್ಯದರ್ಶಿ ಶ್ರೀ ಜಗದೀಶ್ ಮತ್ತು ಶ್ರೀ ಗೋಪಾಲ್‌ರವರ ಕುಟುಂಬಸ್ಥರು ಸೇವಾಧಾಮಕ್ಕೆ ಭೇಟಿ ನೀಡಿ ಸನಿವಾಸಿಗಳೊಂದಿಗೆ ಸಮಾಲೋಚಿಸಿದರು. ಸೇವಾಧಾಮದ ಕಾರ್ಯಚಟುವಟಿಕೆಯ ಬಗ್ಗೆ ವಿವರಿಸಲಾಯಿತು. ಹಾಗೆಯೇ ಸೇವಾಧಾಮದ ಚಟುವಟಿಕೆಯ ಬಗ್ಗೆ ಶ್ಲಾಘನೆ ವ್ಯಕ್ತಪಡಿಸುತ್ತಾ ಸಂಸ್ಥೆಗೆ ವಾಕರ್ ಕೊಡುಗೆಯಾಗಿ ಮತ್ತು ರೂ. 1602/–ವನ್ನು ದೇಣಿಗೆ ನೀಡಿ ಸನಿವಾಸಿಗಳಿಗೆ ಹಣ್ಣುಹಂಪಲುಗಳನ್ನು ವಿತರಿಸಿದರು.

## ಅಜ್ಜೋಳಿಗೆ ಕುಟುಂಬದಿಂದ ರಾಯನ್ ಫೆರ್ನಾಂಡಿಸ್‌ರವರಿಗೆ ಗೌರವಾರ್ಪಣೆ



ದಿನಾಂಕ 17 ರಂದು ಕನ್ಯಾಡಿ ಅಜ್ಜೋಳಿಗೆ ಮನೆಯ ಕೆ.ವಿಷ್ಣುಮೂರ್ತಿರಾವ್‌ರವರು ನಿರ್ಮಿಸಿದ ಭೋಗನ್ ವಿಲ್ಲಾದ ಉದ್ಘಾಟನಾ ಸಮಾರಂಭದಲ್ಲಿ ಸೇವಾಧಾಮದ ನಿರ್ದೇಶಕರಾದ ರಾಯನ್ ಫೆರ್ನಾಂಡೀಸ್‌ರವರಿಗೆ ಅಜ್ಜೋಳಿಗೆ ಕುಟುಂಬದಿಂದ ಸರಳ ರೀತಿಯಲ್ಲಿ ಸನ್ಮಾನ ಕಾರ್ಯಕ್ರಮ ಆಯೋಜನೆಗೊಂಡಿತ್ತು. ಸೇವಾಧಾಮದ ನಿರ್ದೇಶಕರಾಗಿ ಜವಾಬ್ದಾರಿ ನಿರ್ವಹಿಸುವುದರ ಜೊತೆಗೆ ದೀಪಾವಳಿ ಸಂಭ್ರಮಕ್ಕಾಗಿ ಕುವೈಟ್‌ನಲ್ಲಿ ತುಳುಕೂಟ ಆಯೋಜಿಸಿದ ಕಾರ್ಯಕ್ರಮಕ್ಕೆ ಒಬ್ಬಂಟಿಯಾಗಿ ಹೋಗಿ ಬಂದಿರುವ ಪ್ರಯುಕ್ತ ಅವರಿಗೆ ಅಭಿನಂದನಾರೂಪವಾಗಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ನೂರಾರು ಹಿತೈಷಿಗಳ ಸಮ್ಮುಖದಲ್ಲಿ ಕುಟುಂಬ ಪ್ರಮುಖರ ಹಾಗೂ ಸ್ಥಳೀಯ ಸಾಮಾಜಿಕ ಮುಖಂಡರ ಉಪಸ್ಥಿತಿಯಲ್ಲಿ ಜರುಗಿದ ಸನ್ಮಾನ ಕಾರ್ಯಕ್ರಮವು ಮನೋಜ್ಞವಾಗಿತ್ತು ಅಜ್ಜೋಳಿಗೆಯ ಕೆ.ವಿನಾಯಕರಾವ್ ಹಾಗೂ ಕೆ.ವಿವೇಕ ರಾವ್ ಹಾಗೂ ಸಹೋದರಿಯರು ಮತ್ತು ಕುಟುಂಬಸ್ಥರು ಉಪಸ್ಥಿತರಿದ್ದರು.

## ಜೇನು ಕೃಷಿ ತರಬೇತಿ ಕಾರ್ಯಾಗಾರ













ಸೇವಾಧಾಮ ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಸ್ವಉದ್ಯೋಗ ನೀಡುವ ದೃಷ್ಟಿಯಿಂದ ದಿನಾಂಕ 3–11–22 ರಂದು ಸೇವಾಧಾಮದಲ್ಲಿರುವ ಎಲ್ಲಾ ಫಲಾನುಭವಿಗಳು ಹಾಗೂ ಪೋಷಕರಿಗೆ ಜೇನುಕೃಷಿ ತರಬೇತಿಯನ್ನು ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀಯುತ ಶಶಿಧರ್ ಮತ್ತಿಲ ಇವರು ಆಗಮಿಸಿ ಜೇನುಕೃಷಿಯ ಮಹತ್ವ, ಪ್ರಭೇದಗಳು, ನಿರ್ವಹಣೆ ಮತ್ತು ಪ್ರಯೋಜನಗಳ ಬಗ್ಗೆ ಪ್ರಾಯೋಗಿಕವಾಗಿ ಮಾಹಿತಿ ನೀಡಿದರು. ಸ್ವಉದ್ಯೋಗ ಸಂಯೋಜಕರಾದ ಅಖಿಲೇಶ್ ಮಾತನಾಡಿ ಜೇನುಕೃಷಿಗೆ ಮಾರುಕಟ್ಟೆಯಲ್ಲಿರುವ ಬೇಡಿಕೆ ಮತ್ತು ಬೆಲೆಗಳ ಬಗ್ಗೆ ಮಾಹಿತಿ ನೀಡಿದರು. ಈ ಕಾರ್ಯಕ್ರಮವನ್ನು ಅಖಿಲೇಶ್‌ವರು ಸ್ವಾಗತಿಸಿ ನಿರೂಪಿಸಿದರು ಹಾಗೂ ಧನ್ಯವಾದವಿತ್ತರು.

## ಆನ್‌ಲೈನ್ ಕಾರ್ಯಗಾರ

### ಸೇವಾಸಂಗಮ



ದಿನಾಂಕ14–11–2022 ರಂದು ನವೆಂಬರ್ ತಿಂಗಳ ಸೇವಾಸಂಗಮ ಮೂಲಕ ಅರಿವು ನೀಡುವ ಕಾರ್ಯಕ್ರಮ ಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಅಂಗವಿಕಲರ ಪುನರ್ವಸತಿ ಯೋಜನೆ, ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯದ ರಾಜ್ಯ ಸಂಯೋಜಕರಾದ ಶ್ರೀ ಬಿ.ಸಿ.ನರಸಿಂಹಮೂರ್ತಿಯವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದರು. ವಿಕಲಚೇತನರಿಗೆ ಇಲಾಖೆಯ ಸೌಲಭ್ಯಗಳು, ಪಡೆಯುವ ವಿಧಾನ, ಎಂ.ಆರ್.ಡಬ್ಲ್ಯೂ ಮತ್ತು ವಿ.ಆರ್.ಡಬ್ಲ್ಯೂ ಕಾರ್ಯಕರ್ತರ ಜವಾಬ್ದಾರಿಗಳ ಬಗ್ಗೆ ಮಾಹಿತಿ ನೀಡಲಾಯಿತು. ಒಟ್ಟು 42 ಫಲಾನುಭವಿಗಳು ಭಾಗವಹಿಸಿದ್ದರು.

*The world worries about disability more than disabled people do*

## ನಮ್ಮ ಯೋಜನೆಗಳು

**ಆರೋಗ್ಯಮ್** : ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ** : ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ.

**ಸೇವಾಧಾಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ.

**ಸೇವಾಪಥ** : ಮಾಸಿಕ ಈ–ನ್ಯೂಸ್ ಲೆಟರ್ .

**ಸೇವಾ ಸಂಗಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು:** ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಮೆಡಿಕಲ್ ಕಿಟ್‌ಗಳು.

**ಆರೋಗ್ಯ ಸ್ಪರ್ಶ** : ಉಡುಪಿ ಜಿಲ್ಲೆಯಲ್ಲಿರುವ ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆರೋಗ್ಯ ಇಲಾಖೆಯ ಸಹಯೋಗದಲ್ಲಿ ಮನೆಮನೆಗಳಿಗೆ ಭೇಟಿ ನೀಡಿ ಆರೋಗ್ಯ ತಪಾಸಣೆ.

**ಸಾಮರ್ಥ್ಯಮ್** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ವೃತ್ತಿ ತರಬೇತಿಗಳು.

**ಸೇವಾ ಚರಣ್** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಸಾಧನ ಸಲಕರಣೆಗಳ ಸಹಾಯ.

**ಸೇವಾನಿರ್ಮಲ**: ದಿವ್ಯಾಂಗ ಸ್ನೇಹಿ ಶೌಚಾಲಯ ಮತ್ತು ರ್‍ಯಾಂಪ್‌ಗಳಿಗೆ ಭಾಗಶಃ ಧನ ಸಹಾಯ.

**ಆರೋಗ್ಯ ಸಿಂಧು** : ಆರೋಗ್ಯ ತಪಾಸಣೆ ಮಾಹಿತಿ ಹಾಗೂ ತರಬೇತಿಗಳು.

### ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

ರೂ. 2000/– ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್‌ಗಳಿಗಾಗಿ ಸಹಕಾರ.

ರೂ. 6000/– ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ

ರೂ. 4500/– ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ

ರೂ. 3000/– ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ದಿನದ ಊಟೋಪಚಾರಕ್ಕೆ ಸಹಕಾರ

ರೂ. 10000/– ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ

ರೂ. 15000/– ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ

ರೂ. 10000/– ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು

### Account Details

A/c Holder - M/s. Sevabharathi(R)
A/c No - 120000400920
IFS Code - CNRB0010246
Bank - Canara Bank, Dharmasthala Branch
A/c Type - Current Account

A/c Holder - M/s. Sevabharathi(R)
A/c No - 01682200072637
IFS Code - CNRB0010168
Bank - Canara Bank, Kokkada Branch

**DONATE & JOIN US IN OUR MISSION**

*We are put in situations to build our charactes... not destroy us*

# ಬೆನ್ನುಹುರಿ ಅಪಘಾತಕ್ಕೊಳಗಾದವರ ಸ್ವ ಉದ್ಯೋಗ ಪ್ರೇಮ

# ಬದುಕು ಸಿಹಿಯಾಗಿಸಿದ ಜೇನು ಕೃಷಿ



ವಿಶ್ವಾಸ ಮತ್ತು ನಂಬಿಕೆಗಳ ಆಧಾರದಲ್ಲಿ ಮನುಷ್ಯ ಪ್ರತಿ ಹಂತದಲ್ಲು ತನ್ನ ಜೀವನದ ಮಜಲುಗಳಾಚೆಗೆ ಕ್ರಮಿಸುತ್ತಾ ಸಾಗುತ್ತಾನೆ. ವಿಧಿಲಿಖಿತ ನೋವುಗಳು ಮನುಷ್ಯನನ್ನು ಕುಗ್ಗಿಸಿದರೂ ಒಂದಷ್ಟು ಅವಕಾಶಗಳು ಜೀವನದ ಸಾಮರ್ಥ್ಯವನ್ನು ಬೆಳೆಸುತ್ತದೆ. ಬೆನ್ನುಹುರಿ ಅಪಘಾತಕ್ಕೊಳಗಾದವನ ಬದುಕು ಮತ್ತು ಬವಣೆಗಳನ್ನು ತೀರ ಹತ್ತಿರದಿಂದ ಆಧರಿಸಲು ಸಮರ್ಪಕ ಸಂಸ್ಥೆಗಳೇ ಹುಟ್ಟಿಕೊಂಡಿರದ ಕಾಲಘಟ್ಟದಲ್ಲಿ ಸೇವಾಭಾರತಿ ಎಂಬ ಸಂಸ್ಥೆಯು 2004ರಲ್ಲಿ ಸ್ಥಾಪಿತವಾದ ಸರ್ಕಾರೇತರ ಸಂಸ್ಥೆಯಾಗಿ ಮೂಡಿಬಂದಿತ್ತು.

ಕಳೆದ 18 ವರ್ಷಗಳಿಂದ ಆರೋಗ್ಯ, ಮಹಿಳಾಸಬಲೀಕರಣ ಸ್ವ–ಉದ್ಯೋಗದ ಮೂಲಕ ದಿವ್ಯಾಂಗರ ಕ್ಷೇತ್ರಗಳಲ್ಲಿ ಸಾಮಾಜಿಕ ಸೇವಾಕಾರ್ಯ ಹಾಗೂ ಸಮುದಾಯ ಸೇವೆಗಳಲ್ಲಿ ಸಕ್ರೀಯವಾಗಿ ತೊಡಗಿಸಿಕೊಳ್ಳುತ್ತಾ ಬರುತ್ತಿದೆ. ಮತ್ತೊಂದೆಡೆ ಸೇವಾಭಾರತಿಯ ಘಟಕವಾಗಿ 2018 ರಿಂದ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ ಸೇವಾಧಾಮ ಹೆಸರಿನ ಪುನಃಶ್ಚೇತನ ಕೇಂದ್ರವು ಕಾರ್ಯನಿರ್ವಹಿಸುತ್ತಿದೆ.

ಸೇವಾಧಾಮವು, ಸೇವಾಭಾರತಿ ಸ್ವಯಂ ಸೇವಾ ಸಂಸ್ಥೆಯ ಘಟಕವಾಗಿದ್ದು, ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಆರ್ಥಿಕ ಹಾಗೂ ಸಾಮಾಜಿಕವಾಗಿ ಅಪಘಾತಕ್ಕೊಳಗಾದವರ ಆಶಾಕೇಂದ್ರವಾಗಿದೆ. ಇಲ್ಲಿಯ ಸೇವೆಯು ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಅಪಘಾತದ ನಂತರದ ಗಂಭೀರ ತೊಡಕುಗಳನ್ನು ಕಡಿಮೆ ಮಾಡಿ, ಚಲನಶೀಲತೆಯನ್ನು ಹೆಚ್ಚಿಸಿ, ದೀರ್ಘಾವಧಿಯಲ್ಲಿ ಜೀವನೋಪಾಯ ಚಟುವಟಿಕೆಗಳಲ್ಲಿ ತೊಡಗುವಂತೆ ಪ್ರೇರೇಪಿಸುತ್ತದೆ.

### ಜೇನು ಸಾಕಾಣಿಕೆಯತ್ತ ಚಿತ್ತ

ಬದುಕು ನಿಂತ ನೀರಾಗಬಾರದು. ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಸ್ವಉದ್ಯೋಗ ಕಲ್ಪಿಸಿ ಸಮಾಜದಲ್ಲಿ ತಮ್ಮ ಸ್ವಂತ ಕಾಲಿನಲ್ಲಿ ನಿಲ್ಲಬೇಕು ಎಂಬ ಆಶಯದೊಂದಿಗೆ ಜೇನು ಕೃಷಿಯತ್ತ ಸ್ವಾವಲಂಬಿ ಬದುಕು ಕಟ್ಟಿಕೊಡುವ ನಿರ್ಧಾರವನ್ನು ಸೇವಾಭಾರತಿ ಸಂಸ್ಥೆಯು ಮಾಡಿದೆ. ಅದಕ್ಕಾಗಿ ಸಂಸ್ಥೆಯು (ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು) ಈ ಮೂರು ಜಿಲ್ಲೆಗಳಲ್ಲಿರುವ ಒಟ್ಟು 60 ಫಲಾನುಭವಿಗಳನ್ನು ಗುರುತಿಸಿ ಅವರಿಗೆ ಜೇನು ಕೃಷಿಯನ್ನು ನೀಡಿದೆ.

ಮೊದಲ ಹಂತವಾಗಿ ದಿನಾಂಕ 12/11/2020 ರಂದು ಸೇವಾ ಭಾರತಿ ಹಾಗೂ ಎಪಿಡಿ ಸಂಸ್ಥೆಯ ಸಹಕಾರದೊಂದಿಗೆ ಅರ್ಹ 8 ಫಲಾನುಭವಿಗಳಿಗೆ ತಲಾ 2ರಂತೆ 16 ಜೇನು ಕುಟುಂಬಗಳನ್ನು ನೀಡಲಾಯಿತು.

ನೊಂದವರ ಬದುಕಿಗೆ ಬೆಳಕಾಗುವ ಆಶಾಭಾವದೊಂದಿಗೆ ಪ್ರಾರಂಭಗೊಂಡ ಗಿಫ್ಟ್ ಎಬಲ್ಡ್ ಸಂಸ್ಥೆಯು ಮೊದಲ ಹಂತವಾಗಿ ದಿನಾಂಕ 11/01/21 ರಂದು ಸೇವಾಭಾರತಿ ಸಂಸ್ಥೆಯ ಸಹಕಾರದೊಂದಿಗೆ ಅರ್ಹ 35 ಫಲಾನುಭವಿಗಳಿಗೆ ತಲಾ 2 ರಂತೆ ಜೇನು ಪೆಟ್ಟಿಗೆ ಹಾಗೂ ಅದಕ್ಕೆ ಬೇಕಾಗುವ ಸಲಕರಣೆಗಳನ್ನು ನೀಡಲಾಗಿದೆ. ವಿಕಲಚೇತನರಿಗೆ ಉದ್ಯೋಗ ಕಲ್ಪಿಸುವ ದೃಷ್ಟಿಯಲ್ಲಿ ಸೇವಾಭಾರತಿ ಸಂಸ್ಥೆ ಗುರುತಿಸಲ್ಪಟ್ಟ ಫಲಾನುಭವಿಗಳಿಗೆ ಸುಮಾರು 4.21 ಲಕ್ಷ ಹಣವನ್ನು ಜೇನು ಕೃಷಿ ಯೋಜನೆಗೆ ನೀಡಿದ್ದು ಮುಂದಿನ ಯೋಜನೆಗೂ ಸಹಕರಿಸುತ್ತಿದೆ.

ಸ್ವ ಉದ್ಯೋಗದ ಸಂಯೋಜಕರಾದ ಅಖಿಲೇಶ್ ಎಸ್. ಅವರ ನೇತೃತ್ವದಲ್ಲಿ ಪ್ರತಿ ಮನೆಗಳಿಗೆ ತಿಂಗಳಿಗೆ ಎರಡು ಬಾರಿಯಂತೆ ಭೇಟಿ ನೀಡಿ ಜೇನು ಕೃಷಿಯ ಬಗ್ಗೆ ಸಂಪೂರ್ಣ ತರಬೇತಿಯನ್ನು ನೀಡಲಾಗುತ್ತಿದೆ. 35 ರಲ್ಲಿ 31 ಫಲಾನುಭವಿಗಳು ಜೇನುಕೃಷಿಯಲ್ಲಿ ಸರಾಸರಿ 8 ಕೆ.ಜಿ.ಯಂತೆ (ಮಾರ್ಚ್, ಏಪ್ರಿಲ್, ಮೇ) ತಿಂಗಳಲ್ಲಿ ಆದಾಯವನ್ನು ಗಳಿಸುವಲ್ಲಿ ಯಶಸ್ವಿಯಾಗಿರುವುದು ಸಂಸ್ಥೆಗೆ ಮತ್ತಷ್ಟು ಉತ್ತೇಜನ ದೊರೆತಂತಾಗಿದೆ.

ಈ ಯಶಸ್ಸಿನ ನಂತರ ಪುನಃ ಅವರ ಆದಾಯದ ಮಟ್ಟವನ್ನು ಹೆಚ್ಚಿಸುವ ನಿಟ್ಟಿನಲ್ಲಿ ದ್ವಿತೀಯ ಹಂತವಾಗಿ ದಿನಾಂಕ 1/11/22 ರಂದು ಗಿಫ್ಟ್ ಎಬಲ್ಡ್ ಸಂಸ್ಥೆಯು 8.41 ಲಕ್ಷ ಹಣವನ್ನು ಜೇನು ಕೃಷಿಗಾಗಿ ನೀಡುತ್ತಿದೆ, ಈಗಾಗಲೇ ಸೇವಾಭಾರತಿ ಸಂಸ್ಥೆಯು 19 ಫಲಾನುಭವಿಗಳಿಗೆ 4 ಜೇನು ಪೆಟ್ಟಿಗೆಯಂತೆ, 16 ಫಲಾನುಭವಿಗಳಿಗೆ 3 ಜೇನು ಪೆಟ್ಟಿಗೆಯಂತೆ 124 ಜೇನು ಪೆಟ್ಟಿಗೆಗಳನ್ನು ಅರ್ಹ 35 ಫಲಾನುಭವಿಗಳಿಗೆ ಜೇನುಕೃಷಿಯನ್ನು ನೀಡಿದ್ದು, ಬೆನ್ನುಹುರಿ ಅಪಘಾತಕ್ಕೊಳಗಾದವರನ್ನು ಪುನಃಶ್ಚೇತನದ ನಂತರ ಪುನಃ ಹಾಸಿಗೆಗೆ ಹಿಂತಿರುಗದಂತೆ ನೋಡಿಕೊಳ್ಳುವ ಉದ್ದೇಶದೊಂದಿಗೆ ಪ್ರಾರಂಭವಾದ ಈ ಯೋಜನೆಯು ಈಗ ಅವರ ಸಣ್ಣ ಪುಟ್ಟ ಖರ್ಚುವೆಚ್ಚಗಳನ್ನು ನೀಗಿಸುವ ಮೂಲಕ ಕುಟುಂಬಕ್ಕೊಂದು ಆಧಾರವಾಗಿದೆ.

ಈಗಾಗಲೆ ಫಲಾನುಭವಿಗಳು ಜೇನು ಕೃಷಿಯನ್ನು ಉತ್ತಮ ರೀತಿಯಲ್ಲಿ ಮುಂದುವರಿಸುವ ಆಶಾಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಈ ಮೂಲಕ ಸೇವಾಧಾಮವು ಆಶಯ ಕಳೆದುಕೊಂಡ ಬದುಕಿಗೆ ಆಶಾದಾಯಕವಾಗಿದೆ.